ಸಾಕ್ಷಿ ಯನ್ನು ದಿಃ16.07.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ಆರೋಪಿತನು ಮೂಲತಃ ಪಿರಿಯಾಪಟ್ಟಣದ ಟ್ಯಾಂಕ್ ಬಡಾವಣೆಯ ನಿವಾಸಿ ಇರುತ್ತಾನೆ. ನನ್ನ ತಂದೆ ರಮೇಶ 2 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ.

2. ನನ್ನ ರಮೇಶ ರವರು ಚೀಟಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ತನ್ನ ಸ್ವಂತ ಹಣವನ್ನು ಗ್ರಾಹಕರಿಗೆ ನೀಡಿ ಪ್ರತಿನಿತ್ಯ ವಸೂಲಿ ಮಾಡುತ್ತಿದ್ದರು ಎಂದರೆ ಸರಿಯಲ್ಲ.

3. ಆರೋಪಿತನು ಶುಂಠಿ ಮತ್ತು ಬಾಳೆ ವ್ಯಾಪಾರ ಮಾಡುತ್ತಾನೆ. ನಾನು ಮತ್ತು ಆರೋಪಿತನು ಕಳೆದ 6-7 ವರ್ಷಗಳಿಂದ ಪರಿಚಯಸ್ಥರಿರುತ್ತೇವೆ. ಆರೋಪಿತನು ನನ್ನಿಂದ ಬಾಳೆ ಮತ್ತು ಶುಂಠಿ ಕಟಾವು ಮಾಡಿ ಖರೀದಿ ಮಾಡುತ್ತಿದ್ದು ಆ ಮೂಲಕ ನನಗೆ ಪರಿಚಯವಾಗಿರುತ್ತಾರೆ. ಸುಮಾರು 5 ವರ್ಷಗಳ ಹಿಂದೆ ನಮ್ಮ ಜಮೀನಿನಲ್ಲಿ ಬಾಳೆ ಬೆಳೆಯುತ್ತಿದ್ದೆವು.

4. ಸುಮಾರು 5-6 ವರ್ಷಗಳ ಹಿಂದೆ ನಮ್ಮ ಜಮೀನಿಗೆ ಸಂಬಂಧಪಟ್ಟಂತೆ ನನ್ನ ತಂದೆಯವರೇ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಯ ತಂದೆ ಅಂದರೆ ನನ್ನ ತಾತನ ಹೆಸರು ಅಣ್ಣೇಗೌಡ ಇರುತ್ತದೆ. ನನ್ನ ತಾತನಿಗೆ ನನ್ನ ತಂದೆ ರಮೇಶ, ಮಂಜುನಾಥ ಮತ್ತು ಸುರೇಶ ಮಕ್ಕಳು ಇರುತ್ತಾರೆ.

5. ಈ ಪೈಕಿ ನನ್ನ ತಂದೆ ಸಹೋದರ ಮಂಜುನಾಥ ಜೊತೆ ನಾವು ಅನ್ಯೋನ್ಯವಾಗಿರುತ್ತೇವೆ ಎಂದರೆ ಸರಿ. ಮಂಜುನಾಥ ರವರು ಈ ನ್ಯಾಯಾಲಯಕ್ಕೆ ಸುಮಾರು 7-8 ಪ್ರಕರಣಗಳಲ್ಲಿ ಹಾಜರಾಗುತ್ತಾರೆ ಎಂದರೆ ಸರಿ. ಸದರಿ ಮಂಜುನಾಥ ಆರೋಪಿತನ ವಿರುದ್ದ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಹೇಶ್ ಕುಮಾರ್ ನನಗೆ ಗೊತ್ತಿಲ್ಲ.

6. ಆರೋಪಿತನು ವ್ಯವಹಾರದ ಸಲುವಾಗಿ ನನ್ನ ಬಳಿ ಹಣವನ್ನು ಕೇಳಿರುತ್ತಾರೆ. ನಿರ್ದಿಷ್ಟವಾಗಿ ಏನು ವ್ಯವಹಾರಕ್ಕೆ ಹಣ ಬೇಕೆಂಬುದನ್ನು ಆರೋಪಿತ ನನ್ನಲ್ಲಿ ಹೇಳಿರುವುದಿಲ್ಲ. ಸದರಿ ಆರೋಪಿತನು ವ್ಯವಹಾರದ ಉದ್ದೇಶಕ್ಕಾಗಿ ಸಾಲವನ್ನು ಕೇಳಿದ್ದನು ಎಂದು ನಾನು ನನ್ನ ಪಿರ್ಯಾದಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಆ ರೀತಿ ಬರೆಸಲು ನನಗೆ ತೊಂದರೆ ಇರಲಿಲ್ಲ. ಆರೋಪಿತನು ಡಿಸೆಂಬರ್ 2023 ರಲ್ಲಿ ನನ್ನ ಬಳಿ ಬಂದಿರುತ್ತಾರೆ ಆದರೆ ನನಗೆ ದಿನಾಂಕ ನೆನಪಿರುವುದಿಲ್ಲ. ನಾನು ಬಿಕಾಂ ಪದವೀಧರನಾಗಿರುತ್ತೇನೆ. ನನ್ನ ತಂದೆಗೆ ನಾನು ಮತ್ತು ನನ್ನ ತಮ್ಮ ಇಬ್ಬರು ಮಕ್ಕಳಿರುತ್ತೇವೆ.

7. ಆರೋಪಿತನು ಸಾಲ ಕೇಳಿದ ದಿನಾಂಕ ನನಗೆ ನೆನಪಿರುವುದಿಲ್ಲ. ಆರೋಪಿತನು ನನ್ನ ಮನೆ ಬಳಿ ಸಾಲ ಕೇಳಲು ಬಂದಿರುತ್ತಾರೆ ಆದರೆ ದೂರವಾಣಿ ಕರೆ ಮಾಡಿರುವುದಿಲ್ಲ. ಆರೋಪಿತನು ಹಣ ಕೇಳಿದ 1 ವಾರದ ನಂತರ ನಾನು ಆತನಿಗೆ ಸಾಲ ನೀಡಿರುತ್ತೇನೆ.

ಡಿಸೆಂಬರ್ 2023 ರಲ್ಲಿ ನಾನು ಸಾಲವನ್ನು ನೀಡಿರುತ್ತೇನೆ ಆದರೆ ದಿನಾಂಕ ನನಗೆ ನೆನಪಿಲ್ಲ. ಆರೋಪಿತನು ಡಿಸೆಂಬರ್ ತಿಂಗಳಲ್ಲಿ ನನ್ನಲ್ಲಿ ಹಣವನ್ನು ಕೇಳಿದ್ದು ಅದಾದ 1 ತಿಂಗಳ ನಂತರ ನಾನು ಆತನಿಗೆ ಸಾಲ ನೀಡಿರುತ್ತೇನೆ ಎಂದು ನನ್ನ ಪಿರ್ಯಾದಿಯಲ್ಲಿ ಬರೆಸಿರುವುದಿಲ್ಲ.

8. ನಾನು ವ್ಯಾಪಾರ, ವ್ಯವಹಾರ ಮತ್ತು ವ್ಯವಸಾಯ ಮಾಡುತ್ತೇನೆ. ಸಾಕ್ಷಿ ಸ್ವತಃ ನನಗೆ ಹೋಲ್ ಸೇಲ್  ದಿನಸಿ ಅಂಗಡಿ ಇರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನಾನು ಪುರಸಭೆಯಿಂದ  ಉದ್ಯಮಿ ಪರವಾನಗಿ ಪಡೆದುಕೊಂಡಿರುತ್ತೇನೆ. ನಾವು ಜಮೀನಿನಲ್ಲಿ ಶುಂಠಿ, ತೆಂಗು, ಬಟರ್ ಫ್ರೂಟ್ ಹಣ್ಣು ಹಂಪಲು ಮುಂತಾದವುಗಳನ್ನು ಬೆಳೆಯುತ್ತೇವೆ. ನಾವು ಪ್ರತೀ ಎಕರೆಗೆ 400 ಚೀಲ ಶುಂಠಿ ಬೆಳೆಯುತ್ತೇವೆ. ಆ ಬೆಳೆಯನ್ನು ನೀವು ಯಾರಿಗೆ ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಒಬ್ಬ ದಲ್ಲಾಳಿಗೆ ಮಾರಾಟ ಮಾಡಿರುತ್ತೇವೆ ಆದರೆ ಅವರ ಹೆಸರು ತಿಳಿದುಕೊಂಡಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ.

9. 1 ಎಕರೆಯಲ್ಲಿ ಶುಂಠಿ ಬೆಳೆಯಲು 2.50 ರಿಂದ 3 ಲಕ್ಷ ಬೇಕಾಗುತ್ತದೆ. 2023 ರಲ್ಲಿ 1 ಚೀಲಕ್ಕೆ 4,500 ರಿಂದ 5,000/- ಗಳ ಬೆಲೆ ಇತ್ತು. 400 ಚೀಲ ಶುಂಠಿಯನ್ನು ಸಹ ಒಬ್ಬರೇ ದಲ್ಲಾಳಿಗೆ ಮಾರಾಟ ಮಾಡಿರುತ್ತೇವೆ.  ಈ ಬಗ್ಗೆ ರಶೀದಿ  ಇರುತ್ತದೆಯೇ ಎಂಬುದನ್ನು ಮನೆಯಲ್ಲಿ ನೋಡಬೇಕಾಗುತ್ತದೆ.

10. ದಿಃ 16.12.2023 ರಂದು ನನ್ನ ತಂದೆ ಜೀವಂತ ಇದ್ದರು.  ಆ ಸಮಯದಲ್ಲಿ ನಾನು

ವಿದ್ಯಾಭ್ಯಾಸ ಮಾಡುತ್ತಿದ್ದು ಎಲ್ಲಾ ವ್ಯವಹಾರಗಳನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಆ ಸಮಯದಲ್ಲಿ ನಾನು ಮತ್ತು ನನ್ನ ತಂದೆ ಜಂಟಿಯಾಗಿ ವ್ಯವಹಾರ ಮಾಡುತ್ತಿದ್ದೆವು ಎಂದು ಸಾಕ್ಷ್ಯ ನುಡಿಯುತ್ತಾರೆ. ತೆಂಗಿನ ಮರಗಳಿಂದ ವಾರ್ಷಿಕ ಒಟ್ಟು ರೂ.2.5 ರಿಂದ 3 ಲಕ್ಷ ಆದಾಯ ಬರುತ್ತಿತ್ತು. ಸದರಿ ವ್ಯವಸಾಯದಿಂದ ಬಂದ ಆದಾಯದಿಂದ ಹಣವನ್ನು ನನ್ನ ತಂದೆಯವರು ತಮ್ಮ ಮತ್ತು ನನ್ನ ಬ್ಯಾಂಕ್ ಖಾತೆಗೆ ವರ್ಗಾಯಿಸುತ್ತಿದ್ದರು. 2023 ನೇ ಸಾಲಿನ ನನ್ನ ತಂದೆಯ ಬ್ಯಾಂಕ್ ಖಾತೆಯ ತಖ್ತೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

11. ನಾನು 2 ಬ್ಯಾಂಕ್ ನಲ್ಲಿ ಖಾತೆ ಹೊಂದಿರುತ್ತೇನೆ. ಸದರಿ ಬ್ಯಾಂಕ್ ನಲ್ಲಿ ಯಾವುದೇ ಹಣವನ್ನು ಪಡೆಯಲು ಅಥವಾ ಜಮಾ ಮಾಡಲು ಬ್ಯಾಂಕ್ ಖಾತೆಯ ಮೂಲಕವೇ ವ್ಯವಹಾರ ಮಾಡುತ್ತಿದ್ದೆವು ಎಂದರೆ ಸರಿ.

12. ಡಿಸೆಂಬರ್ 2023 ರಲ್ಲಿ ಆರೋಪಿತ ಹಣ ಕೇಳಲು ಬಂದಾಗ ನನ್ನ ಮನೆಯಲ್ಲಿ ಹಣ ನಗದು ರೂಪದಲ್ಲಿ ಇತ್ತು. ಸದರಿ ಹಣವು ಶುಂಠಿ, ಬಾಳೆ ಮತ್ತು ವ್ಯಾಪಾರದಿಂದ ಬಂದ ಹಣವಾಗಿತ್ತು. ಆರೋಪಿತನು ಒಬ್ಬನೇ ನನ್ನ ಬಳಿ ಸಾಲ ಕೇಳಲು ಬಂದಿರುತ್ತಾನೆ. ಆರೋಪಿತನು ಸಾಲವನ್ನು ನೀಡಿದ 1-2 ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ನನ್ನಲ್ಲಿ ತಿಳಿಸಿರುತ್ತಾನೆ. ಆ ಕುರಿತು ನನ್ನ ಪಿರ್ಯಾದಿಯಲ್ಲಿ ಬರೆಸಿರುವುದಿಲ್ಲ. ನಾನು ಸಾಲ

ನೀಡಿದ 2 ತಿಂಗಳಲ್ಲಿ ಮರುಪಾವತಿಗಾಗಿ ಕೇಳಿರುತ್ತೇನೆ. ಸಾಕ್ಷಿ ಸ್ವತಃ ಏಪ್ರಿಲ್ ತಿಂಗಳಲ್ಲಿ ಮರುಪಾವತಿ ಮಾಡುವಂತೆ ಕೇಳಿರುತ್ತೇನೆ.

( ಈ ಹಂತದಲ್ಲಿ ಆರೋಪಿಪರ ವಕೀಲರು ಕಾಲಾವಕಾಶವನ್ನು ಕೋರಿದ್ದು, ಸಮಯನ್ನು ನೀಡಿ ಮುಂದುಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ